## ೨೯. ತೂಗೀರೆ ರಾಯರ

ತೂಗೀರೆ ರಾಯರ ತೂಗೀರೆ ಗುರುಗಳ ತೂಗೀರೆ ಯತಿಕುಲತಿಲಕರ ।
ತೂಗೀರೆ ಯೋಗೀಂದ್ರ ಕರಕಮಲ ಪೂಜ್ಯರ ತೂಗೀರೆ ಗುರು ರಾಘವೇಂದ್ರರ ।೧।

ಕುಂದಣಮಯವಾದ ಚಂದದ ತೊಟ್ಟಿಲೊಳು ಆನಂದದಿ ಮಲಗ್ಯಾರ ತೂಗೀರೆ ।
ನಂದನ ಕಂದ ಮುಕುಂದ ಗೋವಿಂದನ ಅಂದದಿ ಭಜಿಪರ ತೂಗೀರೆ ।೨।

ಯೋಗ ನಿದ್ರೆಯನು ಬೇಗನೆ ಮಾಡುವ ಯೋಗೀಶ ವಂದ್ಯರ ತೂಗೀರೆ ।
ಭೋಗಿಶಯನನ ಪಾದ ಮೊದದಿ ಭಜಿಸುವ ಭಾಗವತರನ್ನ ತೂಗೀರೆ ।೩।

ಶುದ್ಧಸಂಕಲ್ಪದಿ ಬದ್ಧನಿಜ ಭಕ್ತರ ಉದ್ಧಾರ ಮಾಳ್ಪರ ತೂಗೀರೆ ।
ಶುದ್ಧಸಂಕಲ್ಪದಿ ಬದ್ಧ ನಿಜ ಭಕ್ತರ ಯೊಗೀಶ ವಂದ್ಯರ ತೂಗೀರೆ ।೪।

ಭಕ್ತಜನರು ತಮ್ಮ ಭಜನೆಯ ಮಾಡಲು ನಿಜಗತಿ ಇಪ್ಪರ ತೂಗೀರೆ ।
ನಿಜಗುರು ಜಗನ್ನಾಥ ವಿಠಲನ ಪಾದವ ಭಜನೆಯಾ ಮಾಳ್ಪರ ತೂಗೀರೆ ।೫।